# ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
# Bangalore Development Authority

ಬೆಂಅಪ್ರಾ/ನಯೋಸ/DLP-35/24-25/ 999 /2025-26

ಸಂಖ್ಯೆ :
No.

**"ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಆದೇಶ"**

ದಿನಾಂಕ : 29/05/2025
Date :

**ವಿಷಯ:-** ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬೆಳ್ಳಹಳ್ಳಿ ಗ್ರಾಮದ ಸ.ನಂ.85 ರಲ್ಲಿ 3ಎ-00ಗುಂ, ಸ.ನಂ.86 ರಲ್ಲಿ 2ಎ-00ಗುಂ, ಸ.ನಂ.87/1 ರಲ್ಲಿ 1ಎ-10ಗುಂ, ಸ.ನಂ.87/2 ರಲ್ಲಿ 0ಎ-30ಗುಂ, ಸ.ನಂ.88 ರಲ್ಲಿ 1ಎ-15ಗುಂ, ಸ.ನಂ.91 ರಲ್ಲಿ 1ಎ-20ಗುಂ, ಸ.ನಂ.92 ರಲ್ಲಿ 2ಎ-00ಗುಂ, ಒಟ್ಟು 11ಎ-35ಗುಂ [0ಎ-05ಗುಂ ಬಂಡಿದಾರಿ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (17) ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:-**

1. ಅರ್ಜಿದಾರರ ಅರ್ಜಿ ದಿನಾಂಕ: 07.11.2024.
2. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಮಿತಿ ಸಭೆಯ ಠರಾವು ಸಂಖ್ಯೆ: 2.4.5/2025, ದಿನಾಂಕ : 05.04.2025.
3. ಈ ಕಛೇರಿ ಶುಲ್ಕ ವಸೂಲಾತಿ ಸೂಚನೆ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/DLP-35/24-25/571/2025-26 ದಿನಾಂಕ :09.05.2025.
4. ಪ್ರಾಧಿಕಾರದ ಆವರಣದಲ್ಲಿರುವ ಕೆನರಾ ಬ್ಯಾಂಕ್ ಶಾಖೆಯಲ್ಲಿ ಶುಲ್ಕ ಪಾವತಿಸಿರುವ ಚಲನ್ ಸಂಖ್ಯೆ: GN25051452 ದಿನಾಂಕ: 12.05.2025.
5. ತಹಶೀಲ್ದಾರ್, ಯಲಹಂಕ ತಾಲ್ಲೂಕು ರವರಿಗೆ ಈ ಕಛೇರಿ ಪತ್ರ ಸಂಖ್ಯೆ: ಬೆಂಅಪ್ರಾ/ನಯೋಸ/ DLP-35/24-25/571/2025-26 ದಿನಾಂಕ :09.05.2025.
6. ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರ ಕಛೇರಿ ಪತ್ರ ಸಂಖ್ಯೆ:ಎ ಎಲ್ ಎನ್ ಸಿ ಆರ್(ಯ-2)/ಸಿ.ಆರ್/06/2025-26 ದಿನಾಂಕ 22.05.2025
7. ಈ ಕಛೇರಿ ಸುತ್ತೋಲೆ ಸಂಖ್ಯೆ: ಬೆಂಅಪ್ರಾ/ಆಯು/ನಯೋಸ/510/2025-26 ದಿನಾಂಕ 08.05.2025

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬೆಳ್ಳಹಳ್ಳಿ ಗ್ರಾಮದ ಸ.ನಂ.85 ರಲ್ಲಿ 3ಎ-00ಗುಂ, ಸ.ನಂ.86 ರಲ್ಲಿ 2ಎ-00ಗುಂ, ಸ.ನಂ.87/1 ರಲ್ಲಿ 1ಎ-10ಗುಂ, ಸ.ನಂ.87/2 ರಲ್ಲಿ 0ಎ-30ಗುಂ, ಸ.ನಂ.88 ರಲ್ಲಿ 1ಎ-15ಗುಂ, ಸ.ನಂ.91 ರಲ್ಲಿ 1ಎ-20ಗುಂ, ಸ.ನಂ.92 ರಲ್ಲಿ 2ಎ-00ಗುಂ, ಒಟ್ಟು 11ಎ-35ಗುಂ [0ಎ-05ಗುಂ ಬಂಡಿದಾರಿ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲು ಉಲ್ಲೇಖ (1) ರಲ್ಲಿನ ಅರ್ಜಿಯಲ್ಲಿ ಅರ್ಜಿದಾರರಾದ ಮೆ: ಭಾರತೀಯ ಅರ್ಬನ್ ಪ್ರೈ ಲಿ., ರವರು ಕೋರಿರುತ್ತಾರೆ.

---

ಪ್ರಸ್ತಾವನೆಯನ್ನು ದಿನಾಂಕ: 05.04.2025 ರಂದು ನಡೆದ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಉಲ್ಲೇಖ (2) ರ ಠರಾವು ಸಂಖ್ಯೆ: 2.4.5/2025 ರಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿರುತ್ತದೆ. "ಚರ್ಚೆಯ ನಂತರ, ಪ್ರಶ್ನಿತ ಜಮೀನುಗಳ ಭೂಉಪಯೋಗ ಬದಲಾವಣೆ ಆದೇಶ & ಪ್ರಾರಂಭಿಕ ಪ್ರಮಾಣ ಪತ್ರಗಳಲ್ಲಿನ 'ಮಾನ್ಯ ಸರ್ವೋಚ್ಚ ನ್ಯಾಯಾಲಯದ Karnataka State Board of Wakfs v/s The State of Karnataka ದಾವೆ ಸಂ.SLP(C) No. 019701-019702/2013 & SLP (C)…CC No. 011032-011033/2013 ದಾವೆಗಳಲ್ಲಿ ಒಳಗೊಂಡಿದ್ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಡಿಸಲು ತೀರ್ಮಾನಿಸಲಾಯಿತು. ಸಲ್ಲಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯು ಅನುಮೋದಿತ ಮಹಾಯೋಜನೆ RMP-2015 ರ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬೆಳ್ಳಹಳ್ಳಿ ಗ್ರಾಮದ ಸ.ನಂ.85 ರಲ್ಲಿ 3ಎ-00ಗುಂ, ಸ.ನಂ.86 ರಲ್ಲಿ 2ಎ-00ಗುಂ, ಸ.ನಂ.87/1 ರಲ್ಲಿ 1ಎ-10ಗುಂ, ಸ.ನಂ.87/2 ರಲ್ಲಿ 0ಎ-30ಗುಂ, ಸ.ನಂ.88 ರಲ್ಲಿ 1ಎ-15ಗುಂ, ಸ.ನಂ.91 ರಲ್ಲಿ 1ಎ-20ಗುಂ, ಸ.ನಂ.92 ರಲ್ಲಿ 2ಎ-00ಗುಂ, ಒಟ್ಟು 11ಎ-35ಗುಂ [0ಎ-05ಗುಂ ಬಂಡಿದಾರಿ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (17) ರ ಅಡಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ Karnataka State Board of Wakfs v/s The State of Karnataka ದಾವೆ ಸಂ.SLP(C) No. 019701-019702/2013 & SLP (C)…CC No. 011032-011033/2013 ದಾವೆಗಳಲ್ಲಿ ಒಳಗೊಂಡಿದ್ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಡಿಸಿ ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ವಸತಿ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದಿಸಲು ತೀರ್ಮಾನಿಸಲಾಯಿತು. ಈ ಕುರಿತು ನಿಯಮಾನುಸಾರ ಮುಂದಿನ ಕ್ರಮವಹಿಸುವ ಅಧಿಕಾರವನ್ನು ಆಯುಕ್ತರು ರವರಿಗೆ ಪ್ರತ್ಯಾಯೋಜಿಸಲು ನಿರ್ಣಯಿಸಲಾಗಿರುತ್ತದೆ.

ಪ್ರಾಧಿಕಾರದ ಸಮಿತಿ ಸಭೆಯ ತೀರ್ಮಾನದಂತೆ ವಸತಿ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಸಂಬಂಧ ಅರ್ಜಿದಾರರಿಗೆ ಉಲ್ಲೇಖ (3) ರ ಪತ್ರದಂತೆ ವಿವಿಧ ಶುಲ್ಕಗಳ ಬಾಬ್ತು ₹.59,28,520/- (ರೂ.ಐವತ್ತೊಂಭತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ಐನೂರ ಇಪ್ಪತ್ತುಗಳು ಮಾತ್ರ) ಗಳನ್ನು ಪ್ರಾಧಿಕಾರಕ್ಕೆ ಪಾವತಿಸಲು ತಿಳಿಸಲಾಗಿತ್ತು. ಅರ್ಜಿದಾರರು ಉಲ್ಲೇಖ (4) ರಲ್ಲಿ ದಿನಾಂಕ : 12.05.2025 ರಂದು ₹.59,28,520/- (ರೂ.ಐವತ್ತೊಂಭತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ಐನೂರ ಇಪ್ಪತ್ತುಗಳು ಮಾತ್ರ) ಗಳನ್ನು ಕೆನರಾ ಬ್ಯಾಂಕ್ ನ ಚಲನ್ ನಂ. GN25051452 ರ ಮೂಲಕ ಪಾವತಿಸಿದ್ದು, ಪ್ರಾಧಿಕಾರದ ಆರ್ಥಿಕ ವಿಭಾಗದವರು ದೃಢೀಕರಿಸಿರುವಂತೆ ಸದರಿ ಮೊತ್ತವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂದಾಯವಾಗಿರುತ್ತದೆ.

ಉಲ್ಲೇಖ [5] ರಲ್ಲಿ ನಮೂದಿಸಿರುವ ಈ ಕಛೇರಿ ಪತ್ರದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ:ನಅಇ 363 ಬಿಎಂಆರ್ 202 (ಇ), ದಿನಾಂಕ 12.2.2024 ರ ಅನುಸಾರ ಪ್ರಶ್ನಿತ ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬೆಳ್ಳಹಳ್ಳಿ ಗ್ರಾಮದ ಸ.ನಂ.85 ರಲ್ಲಿ 3ಎ-00ಗುಂ, ಸ.ನಂ.86 ರಲ್ಲಿ 2ಎ-00ಗುಂ, ಸ.ನಂ.87/1 ರಲ್ಲಿ 1ಎ-10ಗುಂ, ಸ.ನಂ.87/2 ರಲ್ಲಿ 0ಎ-30ಗುಂ, ಸ.ನಂ.88 ರಲ್ಲಿ 1ಎ-15ಗುಂ, ಸ.ನಂ.91 ರಲ್ಲಿ 1ಎ-20ಗುಂ,

ಸ.ನಂ.92 ರಲ್ಲಿ 2ಎ-00ಗುಂ, ಒಟ್ಟು 11ಎ-35ಗುಂ [0ಎ-05ಗುಂ ಬಂಡಿದಾರಿ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳನ್ನು ಕುರಿತು ಯಾವುದೇ ವ್ಯಾಜ್ಯ / ಪ್ರಕರಣ / ತಕರಾರುಗಳು ಇದ್ದಲ್ಲಿ 15 ದಿನಗಳೊಳಗಾಗಿ ಮಾಹಿತಿ ನೀಡಲು ತಹಶೀಲ್ದಾರ್ ರವರು ಯಲಹಂಕ ತಾಲ್ಲೂಕು, ಯಲಹಂಕ ರವರನ್ನು ಕೋರಲಾಗಿತ್ತು. ಪ್ರಶ್ನಿತ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದು ವ್ಯಾಜ್ಯ/ಪ್ರಕರಣ/ತಕರಾರು ಇಲ್ಲವೆಂದು ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರು ಉಲ್ಲೇಖ (6) ರ ಕಛೇರಿ ಪತ್ರದಲ್ಲಿ ದೃಢೀಕರಿಸಿರುತ್ತಾರೆ.

ಉಲ್ಲೇಖ (7) ರ ಪ್ರಾಧಿಕಾರದ ಸುತ್ತೋಲೆಯಂತೆ ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆಯಾದ ನಂತರ KTCP ಕಾಯ್ದೆ 1961 ಕಲಂ 2(ಬಿ) ರಂತೆ ಅನುಮೋದಿತ ನಕ್ಷೆಯಲ್ಲಿ ಅನ್ವಯಿಸುವಂತೆ ನಾಗರೀಕ ಸೌಲಭ್ಯ ನಿವೇಶನವನ್ನು ಉದ್ಯಾನವನ / ಬಯಲುಜಾಗ, ಸಾರ್ವಜನಿಕ ಉಪಯುಕ್ತತೆ ಜಾಗಗಳಿಗೆ (ಪಬ್ಲಿಕ್ ಯುಟಿಲಿಟಿ), ರಸ್ತೆಗಳನ್ನು ಮತ್ತು ರಸ್ತೆ ವಿಸ್ತರಣೆಗಾಗಿ ಕಾಯ್ದಿರಿಸಿದ ಪ್ರದೇಶಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಲ್ಲಿ ಪ್ರತ್ಯೇಕವಾಗಿ ಖಾತೆಗಳನ್ನು ಸೃಜಿಸಿ ನಾಗರೀಕ ಸೌಲಭ್ಯ ನಿವೇಶನವನ್ನು ಪ್ರಾಧಿಕಾರಕ್ಕೆ ಹಾಗೂ ಉದ್ಯಾನವನ / ಬಯಲುಜಾಗ, ರಸ್ತೆ ವಿಸ್ತರಣೆಗೆ ಕಾಯ್ದಿರಿಸಿರುವ ಪ್ರದೇಶ, ಸಾರ್ವಜನಿಕ ಉಪಯುಕ್ತತೆ ಜಾಗಗಳನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಸಂಬಂಧಿತ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿಕೊಂಡು ಪರಿತ್ಯಾಜನಾ ಪತ್ರದ ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬೆಳ್ಳಹಳ್ಳಿ ಗ್ರಾಮದ ಸ.ನಂ.85 ರಲ್ಲಿ 3ಎ-00ಗುಂ, ಸ.ನಂ.86 ರಲ್ಲಿ 2ಎ-00ಗುಂ, ಸ.ನಂ.87/1 ರಲ್ಲಿ 1ಎ-10ಗುಂ, ಸ.ನಂ.87/2 ರಲ್ಲಿ 0ಎ-30ಗುಂ, ಸ.ನಂ.88 ರಲ್ಲಿ 1ಎ-15ಗುಂ, ಸ.ನಂ.91 ರಲ್ಲಿ 1ಎ-20ಗುಂ, ಸ.ನಂ.92 ರಲ್ಲಿ 2ಎ-00ಗುಂ, ಒಟ್ಟು 11ಎ-35ಗುಂ [0ಎ-05ಗುಂ ಬಂಡಿದಾರಿ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ನಾಗರೀಕ ಸೌಲಭ್ಯ ನಿವೇಶನಗಳನ್ನು ಪ್ರಾಧಿಕಾರಕ್ಕೆ ಹಾಗೂ ಉದ್ಯಾನವನ / ಬಯಲು ಜಾಗ, ಪಬ್ಲಿಕ್ ಯುಟಿಲಿಟಿ ಮತ್ತು ರಸ್ತೆ ಪ್ರದೇಶಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆಗಳಾದ ಬಿಬಿಎಂಪಿ/ನಗರಸಭೆ/ಪುರಸಭೆ/ಗ್ರಾಮಪಂಚಾಯಿತಿಗಳಿಗೆ ಉಚಿತವಾಗಿ ಹಸ್ತಾಂತರಿಸಿದ ಪರಿತ್ಯಾಜನಾ ಪತ್ರವನ್ನು ಸಲ್ಲಿಸುವ, ಪ್ರಶ್ನಿತ ಜಮೀನುಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ Karnataka State Board of Wakfs v/s The State of Karnataka ದಾವೆ ಸಂ.SLP(C) No. 019701-019702/2013 & SLP (C)…CC No. 011032-011033/2013 ದಾವೆಗಳಲ್ಲಿ ಒಳಗೊಂಡಿದ್ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಡಿಸಿ, ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿದೆ.

| | |
|---|---|
| 1 | ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವುದು. |
| 2 | ಸಲ್ಲಿಸಿರುವ ವಸತಿ ಅಭಿವೃದ್ಧಿ ಯೋಜನಾ ನಕ್ಷೆಯಂತೆ ಪರಿತ್ಯಾಜನಾ ಪತ್ರವನ್ನು ನೊಂದಾಯಿಸಿ ಸಲ್ಲಿಸತಕ್ಕದ್ದು. |
| 3 | ವಿವರವಾದ ಕಟ್ಟಡ ನಕ್ಷೆಗಳನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಿಕೊಳ್ಳುವುದು. |

| | |
|---|---|
| 4 | ಪ್ರಾಧಿಕಾರವು ಅನುಮೋದಿಸಿರುವ ಅಭಿವೃದ್ಧಿ ಯೋಜನಾ ನಕ್ಷೆಯಂತೆಯೇ ಅಭಿವೃದ್ಧಿ ಕಾರ್ಯಗಳನ್ನು ಕಾರ್ಯಗತ ಮಾಡುವುದು. ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆ ಮಾಡುವಂತಿಲ್ಲ. |
| 5 | ಸಲ್ಲಿಸಿರುವ ನೋಟರಿ ಪ್ರಮಾಣೀತ ಪ್ರಮಾಣ ಪತ್ರದ ರೀತ್ಯ ಪ್ರಶ್ನಿತ ಜಮೀನುಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ Karnataka State Board of Wakfs v/s The State of Karnataka ದಾವೆ ಸಂ.SLP(C) No. 019701-019702/2013 & SLP (C)...CC No. 011032-011033/2013 ದಾವೆಗಳಲ್ಲಿ ಒಳಗೊಂಡಿದ್ದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂಬ ಷರತ್ತಿಗೆ ಬದ್ಧರಿರತಕ್ಕದ್ದು. ಅಲ್ಲಿಯವರೆಗೆ ಯಾವುದೇ ಮೂರನೇ ವ್ಯಕ್ತಿಯ ಹಿತಾಸಕ್ತಿಯನ್ನು ಸೃಜಿಸುವಂತಿಲ್ಲ. |
| 6 | ವಸತಿ ಅಭಿವೃದ್ಧಿ ಯೋಜನೆ ನಕ್ಷೆಯಲ್ಲಿ ಕಾಯ್ದಿರಿಸಿರುವ ಉದ್ಯಾನವನ / ಬಯಲುಜಾಗದ ಪ್ರದೇಶವು ಸೇರಿದಂತೆ ಹಾಗೂ ವಸತಿ ಅಭಿವೃದ್ಧಿ ಯೋಜನಾ ಪ್ರದೇಶದಲ್ಲಿ 240.0 ಚ.ಮೀ FAR (Builtup Area) ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿಯ ಗಿಡಮರಗಳನ್ನು ಬೆಳೆಸುವುದು. ಕಟ್ಟಡ ಸ್ವಾಧೀನ ಪತ್ರ ನೀಡುವ ಸಕ್ಷಮ ಪ್ರಾಧಿಕಾರವು ಸ್ವಾಧೀನ ಪತ್ರ ನೀಡುವ ಸಂದರ್ಭದಲ್ಲಿ ಸದರಿ ಗಿಡಮರಗಳ ಕನಿಷ್ಠ 2.00 ಮೀ ಎತ್ತರ ಇರುವುದನ್ನು ಖಚಿತಪಡಿಸಿಕೊಳ್ಳುವುದು. |
| 7 | ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸುವ ಪ್ರದೇಶದಲ್ಲಿ ಹಾಗೂ Buffer ಪ್ರದೇಶದಲ್ಲಿ ವಿವಿಧ ಜಾತಿಯ ಮರಗಿಡಗಳನ್ನು ಬೆಳಸಿ ಅಭಿವೃದ್ಧಿಪಡಿಸುವುದು. ಹಾಗೂ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. |
| 8 | ಸದರಿ ಪ್ರದೇಶದ ಒಳಗೆ ಹೋಗಲು ಮತ್ತು ಹೊರಗೆ ಬರಲು ಸಂಚಾರ ವ್ಯವಸ್ಥೆಯಲ್ಲಿ ಅಡಚಣೆ ಉಂಟಾಗದಂತೆ ವ್ಯವಸ್ಥೆ ಕಲ್ಪಿಸುವುದು. ವಾಹನ ತಪಾಸಣೆಗೆ ಮತ್ತು ಭದ್ರತಾ ವ್ಯವಸ್ಥೆಯನ್ನು ಅಳವಡಿಸಿದಲ್ಲಿ ಸ್ವತ್ತಿನ ಒಳಭಾಗದಲ್ಲಿ ನಿರ್ವಹಿಸುವುದು. |
| 9 | ಸ್ವಾಭಾವಿಕವಾಗಿ ಇಳಿಜಾರು ಕಡೆ ಹೋಗುವ ಮಳೆ ನೀರನ್ನು ಡ್ರೈನ್ ಮುಖಾಂತರ ವ್ಯಾಲಿಗೆ ತಂದು ಸೇರಿಸುವುದು ಹಾಗೂ ನೀರು ಸರಾಗವಾಗಿ ಹರಿಯಲು ಸೂಕ್ತ ವ್ಯವಸ್ಥೆ ಮಾಡುವುದು. |
| 10 | ವಿವರವಾದ ಕಟ್ಟಡ ನಕ್ಷೆಗಳನ್ನು ಅನುಮೋದಿಸುವ ಸಕ್ಷಮ ಪ್ರಾಧಿಕಾರವು Structural Stability ಬಗ್ಗೆ ಹಾಗೂ ವಿವಿಧ ಇಲಾಖೆಗಳು ನೀಡುವ NOC ಗಳಲ್ಲಿನ ಷರತ್ತುಗಳೊಂದಿಗೆ ಪರಿಶೀಲಿಸಿಕೊಳ್ಳತಕ್ಕದ್ದು. |
| 11 | ಕಟ್ಟಡ ನಕ್ಷೆ ಅನುಮೋದನೆ ಸಮಯದಲ್ಲಿ ತಳಮಹಡಿ ಅಗತ್ಯತೆ ಬಗ್ಗೆ Water Table ನ ವರದಿ ಪಡೆದು ಅದಕ್ಕನುಗುಣವಾಗಿ ಕ್ರಮ ಜರುಗಿಸುವುದು. |
| 12 | ಅರ್ಜಿದಾರರು ಉದ್ದೇಶಿಸಿರುವ ಜಮೀನಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ, ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಅನುಮೋದಿತ ಅಭಿವೃದ್ಧಿ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ. |

| | |
|---|---|
| 13 | ಪ್ರಸ್ತಾವನೆಗೆ ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ತಾಂತ್ರಿಕ ಅನುಮೋದನೆ ನೀಡಿರುವುದರಿಂದ, ಈ ಅನುಮೋದನೆ ದಾಖಲೆಯನ್ನು ಮಾಲೀಕತ್ವವನ್ನು ನಿರೂಪಿಸುವ ದಾಖಲೆಯೆಂದು ಪರಿಗಣಿಸಲು ಬರುವುದಿಲ್ಲ. |
| 14 | ದಿನಾಂಕ: 16/1/2010 ರಂದು ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡವಳಿಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಹಾಗೂ ದಿನಾಂಕ: 07/01/2011 ರಂದು ಜರುಗಿದ ಸಮಿತಿ ಸಭೆಯ ವಿಷಯ ಸಂಖ್ಯೆ:09/2011ರ ತೀರ್ಮಾನದಂತೆ ಅಭಿವೃದ್ಧಿನಕ್ಷೆಯಲ್ಲಿ Arrangement of Blocks ಗಳನ್ನು ವಲಯನಿಯಮಾವಳಿಗಳಂತೆ ಪರಿಶೀಲಿಸಲಾಗಿದ್ದು, ಕಟ್ಟಡ ನಕ್ಷೆಗೆ ಸಂಬಂಧಿಸಿದ ಇತರೆ ವಿವರಗಳನ್ನು ಪರಿಶೀಲಿಸುವುದಿಲ್ಲ. ಇದನ್ನು ಕಟ್ಟಡನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರವು ವಿವಿಧ ಇಲಾಖೆಗಳಿಂದ NOC ಗಳನ್ನು ಮತ್ತು ಇನ್ನಿತರೇ ಅರ್ಜಿದಾರರಿಂದ ಪಡೆದು ನಿಯಮಾನುಸಾರ ಪರಿಶೀಲಿಸಿಕೊಳ್ಳತಕ್ಕದ್ದು. |
| 15 | ಅಭಿವೃದ್ಧಿ ಯೋಜನಾ ನಕ್ಷೆ ಅನುಮೋದನೆ ಸಂಬಂಧ ಜಮೀನಿನ ಮಾಲೀಕತ್ವದ ಬಗ್ಗೆ ಅರ್ಜಿದಾರರು ತಪ್ಪು ಮಾಹಿತಿ / ದಾಖಲಾತಿ ನೀಡಿದ್ದು ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ಅಭಿವೃದ್ಧಿ ಯೋಜನಾ ನಕ್ಷೆಯ ಅನುಮೋದನೆಯು ತನ್ನಿಂತಾನೇ ರದ್ದಾಗುತ್ತದೆ. |
| 16 | ಅಭಿವೃದ್ಧಿ ನಕ್ಷೆಯಲ್ಲಿ Sewage Treatment Plant, Solid Waste Management, RWH, Transformer Yard ಗೆ ಅಗತ್ಯ ಜಾಗಗಳನ್ನು ಗುರುತಿಸಿ Dual Piping System ಅನ್ನು ಅಳವಡಿಸಿ KSPCB, BWSSB, BESCOM ರವರಿಂದ ಅಗತ್ಯ NOC ಗಳನ್ನು ಪಡೆದು ಅವರ ನಿರ್ದೇಶನದಂತೆ ಅಳವಡಿಸುವುದು. |
| 17 | ಪ್ರಶ್ನಿತ ಜಮೀನುಗಳನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಅರ್ಜಿದಾರರು ಕಡ್ಡಾಯವಾಗಿ ಮಳೆನೀರು ಕೊಯ್ಲಿಗೆ ಸಂಬಂದಿಸಿದಂತೆ ಪೂರ್ಣ ವಿವರಗಳನ್ನು ನಕ್ಷೆಯಲ್ಲಿ ಗುರುತಿಸಿ ಉದ್ದೇಶಿತ ಒಟ್ಟು ಕ್ಷೇತ್ರದಲ್ಲಿ ಯಾವುಧೇ ರೀತಿಯ ಮಳೆ ನೀರು ವ್ಯರ್ಥವಾಗಿ ಹೊರಗೆ ಹೋಗದಂತೆ ಉದ್ದೇಶಿತ ಜಮೀನಿನಲ್ಲಿಯೇ ಭೂಮಿಯ ಒಳಗಡೆ ಇಂಗುವಂತೆ ಮಾಡಲು ವಿನ್ಯಾಸವನ್ನು ಸಿದ್ಧಪಡಿಸಿ ಪೂರ್ಣ ವಿವರಗಳನ್ನು ಅಭಿವೃದ್ಧಿ ನಕ್ಷೆಯಲ್ಲಿ ಗುರುತಿಸಿ ಕಟ್ಟಡ ನಕ್ಷೆ ಅನುಮೋದಿಸುವ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವುದು. |
| 18 | ಪ್ರಶ್ನಿತ ಜಮೀನನ್ನು ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಭೂಮಿಯ ಒಳಗಡೆ ಎಲೆಕ್ಟ್ರಿಕ್ ಕೇಬಲ್ ಗಳನ್ನು ಅಳವಡಿಸತಕ್ಕದ್ದು. |
| 19 | ಕುಡಿಯುವ ನೀರು ಹಾಗೂ ತ್ಯಾಜ್ಯ ನೀರು ವಿಲೇವಾರಿಗಾಗಿ Sewage Treatment Plant ಸಹಿತ ಒಳಚರಂಡಿ ವ್ಯವಸ್ಥೆಯನ್ನು ಅರ್ಜಿದಾರರೇ ಕಲ್ಪಿಸುವುದು. |
| 20 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು. |
| 21 | ರೇರಾ ಅಧಿನಿಯಮ 2016 ಹಾಗೂ ಸಂಬಂಧಿತ ನಿಯಮಗಳು 2017 ರನ್ವಯ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ನೊಂದಣಿ ಮಾಡಿಸುವುದು. |
| 22 | ಪ್ರಶ್ನಿತ ಪ್ರದೇಶದ ಉದ್ದೇಶಿತ ಬೆಳವಣಿಗೆಗಳಿಂದ ಯಾವುದೇ ತ್ಯಾಜ್ಯ ನೀರನ್ನು ಸಂಸ್ಕರಿಸದೇ ಹೊರಬಿಡಬಾರದು. |

| | |
|---|---|
| 23 | ಪ್ರಶ್ನಿತ ಪ್ರದೇಶದಲ್ಲಿ ನೈಸರ್ಗಿಕವಾಗಿ ಅಥವಾ R.S ನಕ್ಷೆ ಅಥವಾ RMP ರಂತೆ ಹಾದು ಹೋಗುವ ಹಳ್ಳ ಮತ್ತು ಕೊಳ್ಳಗಳನ್ನು ಹಾಗೂ ಬಂಡಿದಾರಿ, ಕಾಲುದಾರಿಗಳನ್ನು ಒತ್ತುವರಿ ಮಾಡಬಾರದು. ನೀರಿನ ಹರಿವಿಕೆಗೆ ಅಡಚಣೆ ಉಂಟು ಮಾಡದೇ ಸರಗವಾಗಿ ನೀರು ಹರಿದು ಹೋಗುವಂತೆ ಅಭಿವೃದ್ಧಿಪಡಿಸತಕ್ಕದ್ದು. |
| 24 | ಪ್ರಾಧಿಕಾರವು ವಿಧಿಸುವ ಇತರೆ ಷರತ್ತುಗಳಿಗೆ ಬದ್ಧರಾಗಿರುವುದು. |

ಮೇಲ್ಕಂಡ ಷರತ್ತುಗಳಿಗೊಳಪಡಿಸಿ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, ಬೆಳ್ಳಹಳ್ಳಿ ಗ್ರಾಮದ ಸ.ನಂ.85 ರಲ್ಲಿ 3ಎ-00ಗುಂ, ಸ.ನಂ.86 ರಲ್ಲಿ 2ಎ-00ಗುಂ, ಸ.ನಂ.87/1 ರಲ್ಲಿ 1ಎ-10ಗುಂ, ಸ.ನಂ.87/2 ರಲ್ಲಿ 0ಎ-30ಗುಂ, ಸ.ನಂ.88 ರಲ್ಲಿ 1ಎ-15ಗುಂ, ಸ.ನಂ.91 ರಲ್ಲಿ 1ಎ-20ಗುಂ, ಸ.ನಂ.92 ರಲ್ಲಿ 2ಎ-00ಗುಂ, ಒಟ್ಟು 11ಎ-35ಗುಂ [0ಎ-05ಗುಂ ಬಂಡಿದಾರಿ ಖರಾಬು ಹೊರತುಪಡಿಸಿ] ವಿಸ್ತೀರ್ಣದ ಜಮೀನುಗಳಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ (17) ರ ಅಡಿಯಲ್ಲಿ ವಸತಿ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಆಯುಕ್ತರು,
ಬೆಂಅಪ್ರಾ, ಬೆಂಗಳೂರು

ಇವರಿಗೆ,
ಮೆ: ಭಾರತೀಯ ಅರ್ಬನ್ ಪ್ರೈ ಲಿ.,
ಭಾರತೀಯ ಸಿಟಿ, ಥಣಿಸಂದ್ರ ಮುಖ್ಯರಸ್ತೆ,
ಬೆಂಗಳೂರು-560064.